ಪಕ್ಷಿಲೋಕ

# ಡಿಡ್ ಯು ಡೂ ಇಟ್: ಇದು ಟಿಟ್ಟಿಭದ ಕೂಗು!

■ ಚಿತ್ರಲೇಖನ: ಪ್ರಕಾಶ ಎಸ್. ಮನ್ನಂಗಿ



'ಡಿಡ್ ಯು ಡೂ ಇಟ್, ಡಿಡ್ ಯು ಡೂ ಇಟ್' ಎಂಬ ಕೂಗು ನನ್ನನ್ನು ಅರೆಕ್ಷಣ ಚಕಿತಗೊಳಿಸಿತು. ಹಿಂದೆ ಕ್ಯಾಮರಾ ಹೆಗಲಿಗೇರಿಸಿಕೊಂಡು ಬರುತ್ತಿದ್ದ ಆಕಾಶ ನನ್ನನ್ನು ಪ್ರಶ್ನಾರ್ಥಕ ಚಿಹ್ನೆಯಿಂದ ನೋಡಿದ. ಬ್ಯಾಡಗಿ–ಹಾವೇರಿ ಮಧ್ಯದ ರೈಲು ಹಳಿಯ ಪಕ್ಕದ ಹೊಲದ ಕಾಲುಹಾದಿ ಹಿಡಿದು ಹೆಜ್ಜೆಹಾಕುತ್ತಿದ್ದೆವು. ಈ ಕೂಗಿನ ಜಾಡುಹಿಡಿದು ಅತ್ತಿತ್ತ ಅವಲೋಕಿಸಿದೆವು. ಅದೋ, ಅಲ್ಲಿದೆ ಕಳ್ಳ!

ತಕ್ಷಣ ಗೊತ್ತಾಯಿತು ಈ ಗಡುಸಾದ ಕೂಗು ಕೆಂಪು ಟಿಟ್ಟಿಭದ್ದೆಂದು! ಆಕಾಶ ತಕ್ಷಣ ನಾಲ್ಕೆಂಟು ಫೋಟೋ ಕ್ಲಿಕ್ಕಿಸುವುದರೊಳಗೆ ಹಾರಿ ಕಣ್ಮರೆಯಾಯಿತು.

ಕೆಂಪು ಟಿಟ್ಟಿಭ ಹೊಲ, ಗೋಮಾಳ, ಕೆರೆ, ಹೊಂಡ ಮತ್ತು ನದಿ ದಡಗಳಲ್ಲಿ ಕಂಡುಬರುತ್ತದೆ. ಇದು 'ವೇಡರ್' ಗುಂಪಿನ ದೊಡ್ಡ ಪಕ್ಷಿ. ಪಾರಿವಾಳದ ಗಾತ್ರದ ಪಕ್ಷಿಯಾದ ಇದರ ಬಾಲದಿಂದ ತುದಿಯವರೆಗಿನ ಉದ್ದ ಸುಮಾರು 35 ಸೆಂ.ಮೀ. ಇದೆ. ಬೆನ್ನು, ರೆಕ್ಕೆಯ ಭಾಗ ನೀಲಿ ಹೊಳಪಿನ ಕಂದು ಬಣ್ಣದ್ದಾಗಿದೆ. ಎದೆ, ತಲೆ ಮತ್ತು ಕತ್ತು ಕಪ್ಪಾಗಿದೆ. ಕಣ್ಣಿನ ಹಿಂಭಾಗದಿಂದ ಕತ್ತಿನ ವರೆಗೆ ಬಿಳಿ ಪಟ್ಟಿಯಿದೆ. ಹೊಟ್ಟೆ, ಬಾಲದ ತಳಭಾಗ ಬಿಳಿಯಾಗಿದೆ. ಕಂದು ಹಾಗೂ ಕಪ್ಪಿನ ನಡುವೆ ಬಿಳಿಯ ಪಟ್ಟೆ ಎದ್ದು ಕಾಣುತ್ತದೆ. ಬಿಳಿ ಅಂಚಿನ ಕಪ್ಪು ಮೋಟು ಬಾಲವುಂಟು. ನೀಳವಾದ ಹಳದಿ ಕಾಲುಗಳಿವೆ.

ಹೆಣ್ಣುಗಂಡಿನಲ್ಲಿ ವ್ಯತ್ಯಾಸವಿರುವುದಿಲ್ಲ. ಆದಾಗ್ಯೂ ಗಂಡಿನ ಬಾಲ ಮತ್ತು ಪಾದದ ಮೂಳೆಗಳು ಸ್ವಲ್ಪ ಉದ್ದವಾಗಿವೆ. ಹೆಣ್ಣನ್ನು ಸೆಳೆಯಲು ಗಂಡು ಹಲವಾರು ತಂತ್ರಗಳನ್ನು ಬಳಸುತ್ತದೆ. ಗಂಡಿನ ಮೋಡಿಗೆ ಪರವಶಳಾದ ಹೆಣ್ಣು ಪ್ರೇಮ ನಿವೇದನೆಯನ್ನು ಒಪ್ಪಿಕೊಳ್ಳುತ್ತದೆ. ಅನಂತರ ಸರಸ ಸಲ್ಲಾಪದಲ್ಲಿ ತೊಡಗುತ್ತವೆ. ನೆಲವನ್ನು ಕೆದರಿ ಕಲ್ಲುಗಳ ಮಧ್ಯದಲ್ಲಿ ಕುರಿಗಳು ಹಾಗೂ ಮೊಲದ ಪಿಚಕೆಯನ್ನು ಹರಡಿ ಗೂಡು ಕಟ್ಟುತ್ತವೆ. ಒಮ್ಮೆಗೆ ಮೂರುನಾಲ್ಕು ತತ್ತಿಗಳನ್ನಿಡುತ್ತದೆ. ತತ್ತಿಗೆ ಎರಡೂ ಸೇರಿ ಕಾವು ಕೊಡುತ್ತವೆ.

ತತ್ತಿಗಳಿಂದ ಮರಿಗಳು 30 ದಿನದಲ್ಲಿ ಹೊರಬರುತ್ತವೆ. ಮರಿಗೆ ನೀರು ಕುಡಿಸಲು ಪುಕ್ಕಗಳನ್ನು ನೀರಿನಲ್ಲಿ ಎದ್ದಿಕೊಂಡು ತರುತ್ತವೆ. ಇವು ನೀರಿನಲ್ಲಿ ಮಿಂದಮೇಲೆ, ಗೂಡನ್ನು ಬಿಡುವಾಗ ಮತ್ತು ಮಿಲನದ ಅನಂತರ ತಮ್ಮ ಪುಕ್ಕಗಳನ್ನು ಕೊಕ್ಕಿನಿಂದ ತೀಡಿ ಬಾಚಿಕೊಳ್ಳುತ್ತವೆ. ■


